

**ಚಟುವಟಿಕೆ 22: ತ್ಯಾಜ್ಯ ವಸ್ತುಗಳ ಮರುಕಲ್ಪನೆ**

**ವಯಸ್ಸು:** 8 ವರ್ಷ ಮೇಲ್ಪಟ್ಟವರು

**ಅಗತ್ಯ ವಸ್ತುಗಳು:** ಎ4 ಪೇಪರ್, ಪೆನ್ಸಿಲ್, ನಿಮ್ಮ ಮನೆಯ ಸುತ್ತ ಮುತ್ತ ಸಿಗುವ ವಸ್ತುಗಳು ಮತ್ತು ಪೆನ್ಸಿಲ್ ನ ಸಿಪ್ಪೆಗಳು, ಮತ್ತು ಹಣ್ಣುಗಳು/ತರಕಾರಿ ಸಿಪ್ಪೆಗಳು, ಚಾಕೋಲೇಟ್ ಮೇಲಿನ ಕವರ್ ಗಳು, ಇತ್ಯಾದಿ.

**ಹಂತಗಳು:**

1. ನಿಮ್ಮ ಮನೆಯ ಸುತ್ತ ಮುತ್ತ ಸಿಗುವ ಮತ್ತು ನಿಮಗೆ ತ್ಯಾಜ್ಯ ಎನಿಸುವ ಕೆಲವು ವಸ್ತುಗಳನ್ನು ಹುಡುಕಿ.
2. ನೀವು ಹುಡುಕಿದ ವಸ್ತುಗಳ ಆಕಾರ, ಗಾತ್ರ, ವಿನ್ಯಾಸ ಮತ್ತು ಮಾದರಿಗಳನ್ನು ಎಲ್ಲಾ ಆಯಾಮಗಳಿಂದ ನೋಡಿ.
3. ಆ ವಸ್ತುಗಳು ನೋಡಲು ಚಿಕ್ಕದಾಗಿದೆಯೇ ಅಥವಾ ದೊಡ್ಡದಾಗಿದೆಯೇ? ಆ ವಸ್ತುವನ್ನು ನೋಡಿದಾಗ ನಿಮಗೆ ಬೇರೆ ಏನಾದರೂ ನೆನಪಿಗೆ ಬರುತ್ತಿದೆಯೇ?
4. ಈ ತ್ಯಾಜ್ಯ ವಸ್ತುವನ್ನು ಯಾವುದಾದರೂ ವಸ್ತುವಿನೊಂದಿಗೆ ಮರುಕಲ್ಪನೆ ಮಾಡಿಕೊಳ್ಳಿ ಅದು ಎಷ್ಟು ವಿಭಿನ್ನ ವಿಷಯಗಳಾದರು ಆಗಿರಬಹುದು.
5. ವಸ್ತುವನ್ನು ಸೂಕ್ಷ್ಮವಾಗಿ ವೀಕ್ಷಿಸಿ ಅದರ ರೇಖೆಗಳು ಮತ್ತು ಆಕಾರಗಳು ಹಾಗೂ ವಿವರಗಳನ್ನು ಸ್ಕೆಚ್ ಮಾಡಿ .
6. ನಿಮ್ಮ ಸ್ಕೆಚ್ ಗೆ ಕೆಲವು ವಿವರಗಳನ್ನು ಸೇರಿಸಿ ಮತ್ತು ಅದನ್ನು ನೀವು ಮರುಕಲ್ಪನೆ ಮಾಡಿಕೊಂಡ ವಸ್ತುವಿಗೆ ಬದಲಾಯಿಸಿ.
7. ನೀವು ಒಂದು ಆಲೋಚನೆಯನ್ನು ಚಿತ್ರಿಸಿದ ನಂತರ, ಮತ್ತೊಂದು ವಿಷಯವನ್ನು ಚಿತ್ರಿಸಿ ಮತ್ತು ಅದೇ ಪ್ರಕ್ರಿಯೆಯನ್ನು ಅನುಸರಿಸಿ.

*ನಮ್ಮ ಚಟುವಟಿಕೆಗಳು ನಿಮಗೆ ಆಕರ್ಷಕ ಮತ್ತುಆಸಕ್ತಿದಾಯಕ ಎಂದು ನಿಮಗೆ ಅನಿಸಿದರೆ ನಿಮ್ಮ ಅನುಭವಗಳನ್ನು ಫೇಸ್ ಬುಕ್ ಮತ್ತು ಇನ್ಸ್ಟಾಗ್ರಾಮ್ ನಲ್ಲಿ ಹಂಚಿಕೊಳ್ಳಬಹುದು @artsparksfoundation ಎಂದು ಟ್ಯಾಗ್ ಮಾಡಿ. ನಮ್ಮ ಇತರ ಚಟುವಟಿಕೆಗಳು ಮತ್ತು ಮಾಹಿತಿಗಳನ್ನು ಪಡೆಯಲು ನೀವು ನಮ್ಮನ್ನು ಅನುಸರಿಸಬಹುದು.*

*ArtSparks Foundation*

ARTSPARKS
CURIOSITY. CREATIVITY. LEARNING.

*[www.art-sparks.org](http://www.art-sparks.org)*